**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 800/2021**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1**

ದಿಃ **23.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ರವಿ ಜೆ ಸಿ |
| **ಗಂಡ/ತಂದೆಯ ಹೆಸರು** | **ಚಿಕ್ಕಸಿದ್ದಯ್ಯ** |
| **ವಯಸ್ಸು** | 55 ವರ್ಷ |
| **ಕೆಲಸ** | **ಕೆ ಎಸ್ ಆರ್ ಟಿ ಸಿ ಡ್ರೈವರ್** |
| ವಾಸಸ್ಥಳ | ಮೈಸೂರು |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

2005 ರಿಂದ ಕೆ ಎಸ್ ಆರ್ ಟಿ ಸಿ ಯಲ್ಲಿ ಬಸ್ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ21.01.2020 ರಂದು ಮೈಸೂರಿನಿಂದ ಕಣ್ಣೂರಿಗೆ ಕೆ ಎ 09 ಎಫ್ 5188 ಬಸ್ಸಿನಲ್ಲಿ ಬೆಳಿಗ್ಗೆ 7.30 ಗಂಟೆಗೆ ಹೊರಟಿರುತ್ತೇವೆ. ನಂತರ ಮಧ್ಯಾಹ್ನ 2 ಗಂಟೆಗೆ ಕಣ್ಣೂರಿನಿಂದ ಮೈಸೂರಿಗೆ ಹುಣಸೂರು ರೂಟಿನ ಮೇಲೆ ಹೊರಟಿದ್ದೆವು. ಸಂಜೆ ಸುಮಾರು 7.30 ಗಂಟೆಗೆ ಬನ್ನಿಕುಪ್ಪೆ ಬಳಿ 2 ಬೈಕ್ ಅಕ್ಕಪಕ್ಕದಲ್ಲಿ ಹೋಗುತ್ತಿತ್ತು. ಒಂದು ಬೈಕ್ ಲ್ಲಿ ಇಬ್ಬರು ಇದ್ದರು ಹಾಗೂ ಇನ್ನೊಂದು ಬೈಕ್ ಲ್ಲಿ ಮೂವರು ಇದ್ದರು. ನಾವು ಬೈಕ್ ನ ಹಿಂದೆ ಬಸ್ಸಿನಲ್ಲಿ ಇದ್ದೆವು, ನಮ್ಮ ಹಿಂದೆ ತುರ್ತುವಾಹನ ಬರುತ್ತಿತ್ತು. ಸದರಿ ತುರ್ತುವಾಹನ ಹಾರನ್ ಮಾಡಿತು, ನಂತರ ನಾವು ಹಾರನ್ ಮಾಡಿದೆವು. ನಂತರ ತುರ್ತುವಾಹನ ಮುಂದೆ ಹೋಯಿತು. ನಂತರ ಬೈಕಿನಲ್ಲಿದ್ದವರು ನಮ್ಮ ಬಸ್ಸನ್ನು ಅಡ್ಡಗಟ್ಟಿದರು. ನಾನು ಬಸ್ಸನ್ನು ನಿಲ್ಲಿಸಿದೆ. ಆಗ ಬೈಕ್ ನಲ್ಲಿದ್ದ ವ್ಯಕ್ತಿಗಳು ನಮಗೆ ಹಾರನ್ ಮಾಡುತ್ತೀಯಾ ಎಂದು ನನ್ನನ್ನು ಪ್ರಶ್ನಿಸಿದರು. ನಾನು ಇಳಿಯಲು ಹೋದಾಗ ನನ್ನ ವಾಹನದ ಡೋರನ್ನು ಜೋರಾಗಿ ತಳ್ಳಿದರು ಅದರಿಂದ ಬಾಗಿಲು ನನ್ನ ಮುಖಕ್ಕೆ ತಗುಲಿತು. ನಂತರ ನಾನು ಬಸ್ಸಿನಿಂದ ಇಳಿದೆ, ಅವರು ನನಗೆ ಅವಾಚ್ಯಶಬ್ದಗಳಿಂದ ಬೈದು ನನಗೆ ಹೊಡೆದರು. ಬಸ್ಸಿನ ನಿರ್ವಾಹಕರು ಹಾಗೂ ಪ್ರಯಾಣಿಕರು ಜಗಳವನ್ನು ಬಿಡಿಸಿದರು. ನಂತರ ನಾನು ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಇದರಿಂದ ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ1 ಹಾಗೂ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ನಂತರ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 7.15 ರಿಂದ 8.15 ಸಮಯದಲ್ಲಿ ಚಾಸಾ2 ಹಾಗೂ 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದರು. ಪೊಲೀಸರು ನಮ್ಮ ವಾಹನವನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ನ್ನು ನಿಪಿ2 ಹಾಗೂ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ</u>**

ನಿಪಿ2 ರಂತೆ ಮಹಜರ್ ಜರುಗಿಸುವ ಸಮಯದಲ್ಲಿ ಚಾಸಾ5 ರವರೂ ಹಾಜರಿದ್ದರು ಎಂದರೆ ಸರಿ. ದಿಃ21.01.2020 ರಂದು ಇನ್ನೊಂದು ಹೊಸ ಬೈಕ್ ನಲ್ಲಿ ಗಲಾಟೆ ಮಾಡಿದವರ ಹೆಸರು ನನಗೆ ತಿಳಿದು ಬಂತು ಅವರ ಹೆಸರು ಕುಮಾರ್ ಹಾಗೂ ಗಿರೀಶ್ ಎಂದು ತಿಳಿದುಬಂದಿರುತ್ತದೆ. ಹಾಗೂ ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು 1 ರಿಂದ 3 ನೇ ಆರೋಪಿತರ ಪರ ಶ್ರೀ ಬಿ ಎಸ್ ಎಸ್ ವಕೀಲರಿಂದಃ</u>**

ನನ್ನನ್ನು ಸದರಿ ದಿನದಂದು ಆ ರೂಟಿನಲ್ಲಿ ಬಸ್ಸನ್ನು ಚಲಾಯಿಸಲು ಡಿಪೋ ಮ್ಯಾನೇಜರ್ ನೇಮಕ ಮಾಡಿರುತ್ತಾರೆ. ಮೈಸೂರಿನಿಂದ ಕಣ್ಣೂರಿನವರೆಗೂ ಸಿಂಗಲ್ ಡ್ಯೂಟಿ. ಮೈಸೂರಿನಿಂದ ಕಣ್ಣೂರು 195 ಕಿ ಮೀ ದೂರವಾಗುತ್ತದೆ. ನಮ್ಮ ಲಾಗ್ ಶೀಟಿನಲ್ಲಿ ಯಾವ ಸಮಯದಲ್ಲಿ ಮೈಸೂರು ಬಿಡಬೇಕು, ಯಾವ ಸಮಯದಲ್ಲಿ ಕಣ್ಣೂರು ತಲುಪಬೇಕೆಂದು ನಮೂದಾಗಿರುತ್ತದೆ ಎಂದರೆ ಸರಿ. ಕಣ್ಣೂರಿನಿಂದ ಮೈಸೂರಿಗೆ ಸಂಜೆ 7.30 ಗಂಟೆಗೆ ತಲುಪಬೇಕಾಗಿತ್ತು. ಆ ದಿನ ಗಲಾಟೆ ಆಗಿದ್ದ ಬಗ್ಗೆ ನಾನು ಮೇಲಾಧಿಕಾರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ನಿಮ್ಮ ಲಾಗ್ ಶೀಟಿನಲ್ಲಿ ಮೈಸೂರನ್ನು ಬೆಳಿಗ್ಗೆ 6.45 ಕ್ಕೆ ಬಿಟ್ಟು ಕಣ್ಣೂರಿಗೆ 11.15 ಕ್ಕೆ ತಲುಪಬೇಕೆಂದು ನಮೂದಾಗಿರುತ್ತದೆ ಎಂದರೆ ಸರಿ. ಕಣ್ಣೂರನ್ನು 12.45 ಕ್ಕೆ ಬಿಟ್ಟು ಮೈಸೂರಿಗೆ 5.15 ಕ್ಕೆ ತಲುಪಬೇಕೆಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಲಾಗ್ ಶೀಟನ್ನು ನೋಡಿ ನಾನು ಹೇಳಿರುವ ಸಮಯ ಸರಿಯಾಗಿರುತ್ತದೆ. ಲಾಗ್ ಶೀಟಿನಲ್ಲಿ ಸದರಿ ಗಲಾಟೆಯ ಬಗ್ಗೆ ನಮೂದು ಆಗಿರುವುದಿಲ್ಲ ಎಂದರೆ ಸರಿ. ನೀವು ನಿಮ್ಮ ಮುಖ್ಯವಿಚಾರಣೆಯಲ್ಲಿ ಒಂದು ಬೈಕ್ ನಲ್ಲಿ ಇಬ್ಬರು ಹಾಗೂ ಇನ್ನೊಂದು ಬೈಕ್ ನಲ್ಲಿ 3 ಜನ ಕುಳಿತಿರುವ ವಿಚಾರವನ್ನು ಹೇಳಿದ್ದು, ಯಾರು ಯಾವ ಬೈಕ್ ನಲ್ಲಿ ಕುಳಿತುಕೊಂಡಿದ್ದರು ಎಂದು ನಿಖರವಾಗಿ

ಹೇಳಲು ಬರುವುದಿಲ್ಲ. ನಮ್ಮ ಬಸ್ ಎಕ್ಸ್ ಪ್ರೆಸ್ ಬಸ್ ಆಗಿದ್ದು ಆದ್ದರಿಂದ limited stop ಗಳು ಇರುತ್ತವೆ. ನೀವು ಬನ್ನಿಕುಪ್ಪೆಯ ಬಳಿ 3 ನೇ ಆರೋಪಿ ಬೈಕ್ ಗೆ ನಿಮ್ಮ ಬಸ್ಸಿನಿಂದ ತಗುಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಬಸ್ಸಿನಿಂದ ಡಿಕ್ಕಿಪಡಿಸಿದ ಕಾರಣ 3 ನೇ ಆರೋಪಿ ನಿಮ್ಮನ್ನು ಪ್ರಶ್ನಿಸಿದನು ಎಂದರೆ ಸರಿಯಲ್ಲ. ಇದರಿಂದ ನೀವು ಹಾಗೂ ಚಾಸಾ2 ರವರು ನೀವೇ ಸ್ವತಃ ಗಲಾಟೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವೇ ಗಾಡಿಗೆ ಡಿಕ್ಕಿಪಡಿಸಿದ ಕಾರಣ 3 ನೇ ಆರೋಪಿಯನ್ನು ಪೊಲೀಸ್ ಠಾಣೆಗೆ ನಿಮ್ಮ ಬಸ್ಸಿನಲ್ಲಿ ಕರೆದುಕೊಂಡು ಹೋದೆವು ಎಂದರೆ ಸರಿ. ಘಟನಾ ಸಮಯದಲ್ಲಿ ಸುಮಾರು 10-15 ಜನ ಸೇರಿದ್ದರು. ಸುಮಾರು 15-20 ನಿಮಿಷ ಚರ್ಚೆ ನಡೆಯಿತು. ನಾನು 3 ನೇ ಆರೋಪಿಯನ್ನು ಕರೆದುಕೊಂಡು ಬಸ್ಸಿನಲ್ಲಿ ಠಾಣೆಗೆ ಸುಮಾರು 7.15 ಗಂಟೆಗೆ ಹೋದೆವು. ಠಾಣೆಯಲ್ಲಿ ನೀವು ಹಾಗೂ ಪೊಲೀಸರು ಶಾಮೀಲಾದ ಕಾರಣ 3 ನೇ ಆರೋಪಿ ನೀಡಿದ ದೂರನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನೀವೇ 3 ನೇ ಆರೋಪಿಯ ಗಾಡಿಗೆ ಡಿಕ್ಕಿಯನ್ನು ಪಡಿಸಿ ನಿಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿದ್ದೀರಾ ಎಂದರೆ ಸರಿಯಲ್ಲ. ನೀವು ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಚಾಸಾ6 ರವರೂ ಸಹ ಠಾಣೆಯಲ್ಲಿ ಹಾಜರಿದ್ದರು ಹಾಗೂ ಅವರ ಬಸ್ಸಿಗೂ ಸಹ ಇದೇ ರೀತಿ ಗಲಾಟೆಯಾದ ಬಗ್ಗೆ ಅವರು ಹೇಳಿದರು ಆದ ಕಾರಣ ಎಲ್ಲರೂ ಸೇರಿ ಆರೋಪಿತರ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಗಲಾಟೆ ಮಾಡಿರುವುದಿಲ್ಲ ಹಾಗೂ ನಿಮಗೆ ಮೈಕೈಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ನಿಮ್ಮ ಯಾವುದೇ ಸರ್ಕಾರಿ ಕೆಲಸಕ್ಕೆ ಅಡ್ಡಿಯಾಗಿರುವುದಿಲ್ಲ, ನೀವು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಪಾಟೀಸವಾಲು 4 ಮತ್ತು 5 ನೇ ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ</u>**

Sri. SP advocate submits to adopt cross examination conducted by counsel for A1 to 3.

ನಾನು ಮೈಸೂರಿನಿಂದ ಕಣ್ಣೂರಿಗೆ ಸದರಿ ರೂಟಿನಿಂದ ಸುಮಾರು 6 ತಿಂಗಳಿನಿಂದ ಬಸ್ಸನ್ನು ಚಲಾಯಿಸುತ್ತಿದ್ದೆ. ಪ್ರತಿದಿನ ಒಂದೇ ಸಮಯವಿರುತ್ತದೆ. ಪ್ರತಿದಿನ ಕಣ್ಣೂರಿಗೆ ಸುಮಾರು 1.30-1.45 ಗಂಟೆಗೆ ತಲುಪುತ್ತಿದ್ದೆ. ಮೈಸೂರಿನಿಂದ ಕಣ್ಣೂರಿಗೆ ಹೋಗಲು 4-5 ಗಂಟೆ ಸಮಯ ಸಾಕಾಗುತ್ತದೆ ಎಂದರೆ ಸರಿ. ನೀವು 11-12 ಗಂಟೆಯೊಳಗೆ ಕಣ್ಣೂರಿಗೆ ತಲುಪಬಹುದು ಎಂದರೆ ಸರಿಯಲ್ಲ. 2005 ರಿಂದ ನೀವು ಕೆಲಸ ಮಾಡುತ್ತಿದ್ದೀರಿ ಇದರಿಂದ ನಿಮ್ಮ ಮೇಲೆ 5-6 ಪ್ರಕರಣಗಳು ಇವೆ ಎಂದರೆ ಸರಿಯಲ್ಲ. ನೀವು ನಿಮ್ಮ ಬಸ್ಸನ್ನು

ಅತಿವೇಗ ಹಾಗೂ ನಿರ್ಲಕ್ಷ್ಯತೆಯಿಂದ ಓಡಿಸುವ ಕಾರಣ ನಿಮ್ಮ ಮೇಲೆ 5-6 ಪ್ರಕರಣಗಳು ಇವೆ ಎಂದರೆ ಸರಿಯಲ್ಲ. 3 ನೇ ಆರೋಪಿಯ ಹೆಸರು ರಾಕೇಶ್ ಅಥವಾ ರಾಜೇಶ್. ನನಗೆ ಆರೋಪಿತರ ಮುಖ ಪರಿಚಯವಿದೆ. ಅವರ ಹೆಸರುಗಳು ಗೊತ್ತಿಲ್ಲ. ನಾವು ದೂರು ನೀಡಿದ ನಂತರ ಮಹಜರ್ ಆಗುವವರೆಗೂ ಠಾಣೆಯಲ್ಲೇ ಇದ್ದೆವು. ಮಹಜರ್ ಸ್ಥಳಕ್ಕೆ ಪೊಲೀಸ್ ಜೀಪಿನಲ್ಲಿ ಹೋಗಿರುತ್ತೇವೆ. ನಾನು ಪೊಲೀಸ್ ಠಾಣೆಯಲ್ಲಿ ನಿಪಿ1 ಕ್ಕೆ ಮಾತ್ರ ಸಹಿ ಮಾಡಿರುತ್ತೇನೆ. ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಜಾಗಕ್ಕೆ ನಾನು, ಚಾಸಾ 2 ಹಾಗೂ ಪೊಲೀಸರು ಭೇಟಿ ನೀಡಿದ್ದೆವು. ಪೊಲೀಸ್ ಠಾಣೆಯಲ್ಲಿ ನಿಪಿ2 ಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಹಿಂದೆ ಯಾವುದೇ ತುರ್ತು ವಾಹನ ಬಂದಿರುವುದಿಲ್ಲ ಹಾಗೂ ನೀವು ಹೇಳಿರುವ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಅವಾಚ್ಯಶಬ್ದಗಳಿಂದ ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿಯಾಗಿರುವುದಿಲ್ಲ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.